## ಕರ್ನಾಟಕ ಸರ್ಕಾರ

ಆಇ 48 ಜಿಐಇ 2020

ಕರ್ನಾಟಕ ಸರ್ಕಾರ ಸಚಿವಾಲಯ
ವಿಧಾನಸೌಧ
ಬೆಂಗಳೂರು,ದಿನಾಂಕ: 12.08.2020

**ಇವರಿಂದ:**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಆರ್ಥಿಕ ಇಲಾಖೆ,
ವಿಧಾನ ಸೌಧ, ಬೆಂಗಳೂರು

**ಇವರಿಗೆ:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಇ-ಆಡಳಿತ ಕೇಂದ್ರ,
ಬಹುಮಹಡಿ ಕಟ್ಟಡ,
ಬೆಂಗಳೂರು.

ಮಾನ್ಯರೆ,

**ವಿಷಯ;**- ಹೆಚ್.ಆರ್.ಎಂ.ಎಸ್ ನಲ್ಲಿ, ಮಾರ್ಚ್-2020 ರ ವೇತನ ಪಾವತಿಸುವ ಬಗ್ಗೆ.

**ಉಲ್ಲೇಖ;**- ಪತ್ರ ಸಂಖ್ಯೆ: ಅಇ 06 ಜಿಐಇ 2020, ದಿನಾಂಕ: 01.04.2020.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರವನ್ನು ಇದರೊಂದಿಗೆ ಲಗತ್ತಿಸಿದೆ. 2020-21 ನೇ ಸಾಲಿನಲ್ಲಿ ಸರ್ಕಾರಿ ನೌಕರರು/ಅಧಿಕಾರಿಗಳ ಪ್ರಸಕ್ತ ಸಾಲಿನ ಹಾಗೂ ಮಾಹೆಯ ವೇತನ ಸೆಳೆದು ಪಾವತಿಸಲು ಮಾತ್ರ ಅನುವು ಮಾಡಿಕೊಡಲು ಕೋರಲಾಗಿತ್ತು.

ಈಗ ಅನೇಕ ಅಧಿಕಾರಿಗಳು ಬಾಕಿ ಪ್ರಭಾರ ಭತ್ಯೆ, ಬಾಕಿ ವಾರ್ಷಿಕ ವೇತನ ಬಡ್ತಿಯ, ವೈದ್ಯಕೀಯ ಭತ್ಯೆ, ಇತ್ಯಾದಿಗಳನ್ನು ಮಂಜೂರು ಮಾಡುವಂತೆ ಕೋರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ 2020-21 ನೇ ಸಾಲಿನಲ್ಲಿ ಆರ್ಥಿಕ ಇಲಾಖೆಯ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ ಆದೇಶದ ಅನ್ವಯ ವೇತನದ ಜೊತೆಗೆ ವೇತನಕ್ಕೆ ಸಂಬಂಧಿಸಿದ ಭತ್ಯೆಗಳನ್ನು ಅಂದರೆ, ಬಾಕಿ ಪ್ರಭಾರ ಭತ್ಯೆ, ಬಾಕಿ ವಾರ್ಷಿಕ ವೇತನ ಬಡ್ತಿಯ, ಬಾಕಿ ವೈದ್ಯಕೀಯ ಭತ್ಯೆ ಇತರೆ ಬಾಕಿ ಭತ್ಯೆಗಳನ್ನು ಪಾವತಿಸಲು ಹೆಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿ ಅನುವು ಮಾಡಲು ಸೂಕ್ತ ಮಾರ್ಪಾಡು ಮಾಡಲು ಕೋರಲಾಗಿದೆ.

ಯಾವುದೇ ಕಾರಣಕ್ಕೂ ಆರ್ಥಿಕ ಇಲಾಖೆಯ ಪೂರ್ವಾನುಮತಿ/ನಿರ್ದೇಶನವಿಲ್ಲದೆ ಹಿಂದಿನ ಸಾಲುಗಳ ವೇತನ ಬಾಕಿ ಬಿಲ್ಲುಗಳನ್ನು ತಯಾರಿಸಲು ಅನುವು ಮಾಡಿಕೊಡಬಾರದೆಂದು ಸ್ಪಷ್ಟವಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕಾಗಿ ಕೋರುತ್ತೇನೆ.

ತಮ್ಮ ನಂಬುಗೆಯ.

(ಚಂದ್ರಶೇಖರ್ ನಾಯಕ್.ಎಲ್)
ಸರ್ಕಾರದ ಉಪ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲ)
ಆರ್ಥಿಕ ಇಲಾಖೆ.

ಪ್ರತಿಯನ್ನು:

ಯೋಜನಾ ನಿರ್ದೇಶಕರು, ಹೆಚ್.ಆರ್.ಎಂ.ಎಸ್. ಇ-ಆಡಳಿತ ಕೇಂದ್ರ, ಬಹುಮಹಡಿ ಕಟ್ಟಡ, ಬೆಂಗಳೂರು.